# ಒಂದು ದಿನ ಕೃಷಿ ಮಾಡುವ ಕನಸು

## ಮಧು ಸಾಗರ್
### ಉದಯದ 'ಅಣ್ಣ ತಂಗಿ'ಯ ಶಿವರಾಜು



◆ ನಿಮ್ಮ ಪರಿಚಯ ಹೇಳಿ...

ಮೂವತ್ತಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಅದರಲ್ಲಿ ಹದಿನೈದಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸಿದ್ದೇನೆ. 'ಶನಿ'ಯಲ್ಲಿ ಸೂರ್ಯದೇವನ ಪಾತ್ರ ಅದ್ಭುತವಾಗಿತ್ತು. 'ಅಣ್ಣತಂಗಿ'ಯಲ್ಲಿ ಶಿವರಾಜು ಪಾತ್ರ ಮಾಡುತ್ತಿದ್ದೇನೆ ಶಿವಣ್ಣ ಎನ್ನುತ್ತಾರೆ. ನನ್ನ ಊರು ಶಿವಮೊಗ್ಗ ಜಿಲ್ಲೆ ಸಾಗರ. ತಂದೆ ರಾಜೇಂದ್ರ ಕುಮಾರ್ ಅಮ್ಮ ಭಾರತಿ. ಊರಲ್ಲಿ ನಮ್ಮದು ಆಟೊ ವರ್ಕ್ಸ್ ಶಾಪ್ ಇದೆ. ಡಾನ್ಸ್ ನನ್ನ ಪ್ಯಾಶನ್. ಊರಿನಲ್ಲಿ 'ಓಂಕಾರ್ ಟ್ರೂಪ್ ಆಫ್ ಡಾನ್ಸ್' ಸಂಸ್ಥೆ ಆರಂಭಿಸಿದ್ದೆ. ಆಗ 50–60 ವಿದ್ಯಾರ್ಥಿಗಳಿದ್ದರು. ನಮ್ಮ ತಂಡದ ಮೂಲಕ ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡುತ್ತಿದ್ದೆ. ನಾನು ಬೆಂಗಳೂರಿಗೆ ಬಂದ ನಂತರ ಸಂಸ್ಥೆಯನ್ನು ನಿಲ್ಲಿಸಬೇಕಾಯಿತು. ಲಾಕ್‌ಡೌನ್ ಸಂದರ್ಭದಲ್ಲಿ ಊರಿಗೆ ಹೋಗಬೇಕು ಎಂದು ಅನ್ನಿಸಿದ್ದು ನಿಜ. ಪೂರ್ಣಾವಧಿ ನಟ ಆಗಿದ್ದರಿಂದ ಸದ್ಯ ಬೆಂಗಳೂರು ಅನಿವಾರ್ಯ. ಮುಂದೆ ನಮ್ಮೂರಲ್ಲಿ ಕೃಷಿ ಮಾಡುವ ಉದ್ದೇಶ ಇದೆ.

◆ ನಟನೆ ಆರಂಭ ಆಗಿದ್ದು ಹೇಗೆ?

ನಟನೆ ನನ್ನ ಪತ್ನಿಯ ತಂದೆ ಸಿರಿಗಂಧ ಶ್ರೀನಿವಾಸ ಮೂರ್ತಿ ಮೂಲಕ ಅಭಿನಯದ ಮಾರ್ಗ ಸಿಕ್ಕಿತು. ಅವರು ನಿರ್ಮಾಪಕರು, ನಿರ್ದೇಶನವನ್ನೂ ಮಾಡುತ್ತಿದ್ದರು. ದೂರದರ್ಶನದಲ್ಲಿ 'ಸಿರಿಗಂಧ' ಮಾಡಿದ್ದರು. ಆಗ ಒಂದು ಹಾಡಿಗೆ ಕೊರಿಯೊಗ್ರಫಿ ಮಾಡಲು ನನಗೆ ಅವಕಾಶ ನೀಡಿದರು. ಒಂದು ಹಾಡಿಗೆ ಎಂದು ಬಂದವನು ಆ ಪ್ರಾಜೆಕ್ಟ್ ಮುಗಿಯುವತನಕ ಅವರ ಜೊತೆ ಕೆಲಸ ಮಾಡಿದೆ. ನಂತರವೂ ಇಲ್ಲಿ ಕೆಲಸ ಮಾಡುವ ಉದ್ದೇಶ ಇರಲಿಲ್ಲ. ಕ್ಯಾಮೆರಾ ಕೂಡ ಅವರಿಗೆ ಚೆನ್ನಾಗಿ ಗೊತ್ತಿತ್ತು. ಅಷ್ಟರಲ್ಲಿ ಒಂದು ವರ್ಷ ಕಳೆಯಿತು. ನಂತರ ಅವರ ಸಹಾಯಕ ಮತ್ತು ಸಹ ನಿರ್ದೇಶಕನಾಗಿ ಕೆಲಸ ಮಾಡಿದೆ. ನಾನೇ ಒಂದು ಸಾಕ್ಷ್ಯ ಚಿತ್ರವನ್ನೂ ನಿರ್ದೇಶನ ಮಾಡಿದೆ. ಅದು ಕ್ರಮೇಣ ನಟನೆಯತ್ತ ನನ್ನನ್ನು ಕರೆ ತಂದಿದೆ.

◆ ಕುಣಿಸುತ್ತಿದ್ದವರು ಈಗ ನೀವೇ ಕುಣಿಯುತ್ತಿದ್ದೀರಿ. ಇದು ಹೇಗೆನಿಸುತ್ತದೆ?

ಆಕಸ್ಮಾತ್ ಈ ಕ್ಷೇತ್ರಕ್ಕೆ ಬಂದವನು. ಇಲ್ಲಿಗೆ ಬಂದ ನಂತರ ಇದರಿಂದ ಹೊರ ಹೋಗಲು ಮನಸಾಗದೆ ಉಳಿದಿದ್ದೇನೆ. ಎಂದು ಅಭಿನಯವನ್ನು ಆಯ್ಕೆ ಮಾಡಿರಲಿಲ್ಲ. ನೃತ್ಯ ನನ್ನ ನೆಚ್ಚಿನ ಹವ್ಯಾಸ ಆಗಿತ್ತು. ನಂತರ ಸಿನಿಮಾ– ಧಾರಾವಾಹಿ ನಿರ್ದೇಶನ ಮಾಡುವ ಆಸೆಯೂ ಬಂದಿತ್ತು. ಅಷ್ಟರಲ್ಲಿ ಅಭಿನಯವನ್ನು ಆರಂಭಿಸಿದ್ದೆ. ಕೆಲ ವರ್ಷದ ಹಿಂದೆ ಏಕಕಾಲಕ್ಕೆ ಏಳೆಂಟು ಧಾರಾವಾಹಿಯಲ್ಲಿ ನಟಿಸುತ್ತಿದ್ದೆ. ಒಂದೇ ದಿನ ಮೂರು ಧಾರಾವಾಹಿಗಳಿಗೆ ಬಣ್ಣ ಹಚ್ಚಿದ ಸಂದರ್ಭವೂ ಇದೆ. 'ಸೂಪರ್ ಜೋಡಿ'ಯಲ್ಲಿ ನಾನು ನನ್ನ ಪತ್ನಿ ಸುಚಿತಾ ಮೂರ್ತಿ ಭಾಗವಹಿಸಿದ್ದೆವು.

◆ ನಿಮ್ಮ ಮದುವೆ ಕಥೆಹೇಳಿ...

ಈಗಿನ ನನ್ನ ಮಾವ ಬಾಸ್ ಆಗಿದ್ದರು. ಹಾಗೆಯೇ ಕರೆಯುತ್ತಿದ್ದೆವು. ಅವರ ಜೊತೆ ಕೆಲಸ ಮಾಡುತ್ತಾ ಕೌಟುಂಬಿಕ ಸದಸ್ಯ ಎನ್ನುವ ವಾತಾವರಣವನ್ನು ಅವರು ಕಲ್ಪಿಸಿದರು. ದಿನ ಕಳೆದಂತೆ ಒಂದೇ ಮನೆಯವರಂತೆ ಆಗಿದ್ದೆವು. ಸುಚಿತಾ ಮತ್ತು ನನ್ನ ನಡುವೆ ಒಳ್ಳೆಯ ಹೊಂದಾಣಿಕೆ ಇದೆ ಎಂದು ಎರಡೂ ಕುಟುಂಬಗಳು ಸಂಬಂಧವನ್ನು ಬೆಸೆದುಕೊಂಡವು. ಎರಡೂ ಕುಟುಂಬದ ಹಿರಿಯರೇ ನಿಂತು ಮದುವೆ ಮಾಡಿದರು.

◆ ನೆನಪಿನಲ್ಲಿ ಕಾಡುವ ಪಾತ್ರಗಳ ಬಗ್ಗೆ ಹೇಳಬಹುದಾ?

ವೈಶಾಲಿ ಕಾಸರವಳ್ಳಿ ಅವರು ನಿರ್ದೇಶನ ಮಾಡಿದ್ದ 'ಮುತ್ತಿನ ತೋರಣ' ನನ್ನನ್ನೂ ಒಬ್ಬ ಕಲಾವಿದ ಎಂದು ಜನ ಗುರುತಿಸುವಂತೆ ಮಾಡಿತು. ಅದರಲ್ಲಿ ಗಿರಿಧರ ಎನ್ನುವ ಪಾತ್ರ ಮಾಡಿದ್ದೆ. ಕೇವಲ ಏಳು ದಿನಗಳಷ್ಟು ಪ್ರಸಾರ ಆಗಬಹುದಾದ ಪುಟ್ಟ ಪಾತ್ರ ಅದಾಗಿತ್ತು. ಜನರಿಗೆ ಇಷ್ಟ ಆಗಿದ್ದರಿಂದ ಪಾತ್ರ ಕಥೆಯ ಅಗತ್ಯದಂತೆ ಪೋಷಣೆ ಮಾಡಲಾಯಿತು. ಕೊನೆಯ ತನಕ ಅದರಲ್ಲಿ ನಟಿಸಿದ್ದೆ. ಒಳ್ಳೆಯ ಹುಡುಗನಾಗಿದ್ದ ಗಿರಿಧರ ನೆಗೆಟಿವ್ ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. ಇದರಿಂದ ಪದ್ಮಜಾರಾವ್ ನಿರ್ಮಿಸಿದ 'ಬೆಂಕಿಯಲ್ಲಿ ಅರಳಿದ ಹೂವು'ವಿನಲ್ಲಿ ನೆಗೆಟಿವ್ ಪಾತ್ರ ಸಿಕ್ಕಿತು. 'ಸೈ' ರಿಯಾಲಿಟಿ ಶೋದಲ್ಲಿ ಭಾಗವಹಿಸಿ ಒಳ್ಳೆಯ ಸ್ಪರ್ಧೆಯನ್ನು ನೀಡಿದ್ದೆ. 'ಶನಿ'ಯ ನಂತರ ಈ ಪಾತ್ರ ಇಷ್ಟ ಆಗಿದೆ. ಪಾತ್ರವೇ ಭಿನ್ನ ಎಂದು ನನಗೆ ಅನಿಸುತ್ತಿದೆ. ಈ ಮೊದಲು ಅಣ್ಣನಾಗಿ ಮಾಡಿದ್ದರೂ, ಅಣ್ಣತಂಗಿ ಪರಿಕಲ್ಪನೆಯ ಕಥೆಗೆ ನಟಿಸಿರಲಿಲ್ಲ. ಇಲ್ಲಿ ನಮ್ಮ ವೇಷಭೂಷಣ– ವರ್ತನೆ ಎಲ್ಲ ಭಿನ್ನ.

◆ ಸಿನಿಮಾ ಪ್ರಯಾಣದ ಬಗ್ಗೆ ಹೇಳಿ.

ಜಗನ್ನಾಥ್ ನಿರ್ದೇಶನದಲ್ಲಿ ಒಂದು ಸಿನಿಮಾ ಮಾಡಿದೆ. ನನಗೆ ಅಷ್ಟು ಅವಕಾಶಗಳು ಸಿಗಲಿಲ್ಲ. ಇದು ಏಕೆ ಎನ್ನುವುದೇ ಗೊತ್ತಿಲ್ಲ. ಸಿಕ್ಕರೂ ಸೀರಿಯಲ್ ಬಿಟ್ಟು ಹೋಗುವ ಸ್ಥಿತಿಯಲ್ಲಿ ನಾನು ಇರಲಿಲ್ಲ. ಸ್ನೇಹಿತರು ಬಳಗದಲ್ಲಿ ನಾಲ್ಕಾರು ಸಿನಿಮಾ ಮಾಡಿದ್ದೇನೆ. ರಾಧಿಕಾ ಪಂಡಿತ್ ಅವರ ಜೊತೆ 'ಟೆಲಿ ಫಿಲ್ಮ್' ಮಾಡಿದೆ.

■ **ರಾಘವೇಂದ್ರ ಕೆ.**